ಮಕ್ಕಳಿಗಾಗಿ ಬೈಬಲ್
ಅರ್ಪಿಸುವ

# ಯೆಶಾಯನು ಭವಿಷ್ಯತ್ತನ್ನು ನೋಡಿದನು



ಬರಹಗಾರರು: Edward Hughes

ಚಿತ್ರಲೇಖಕರು: Jonathan Hay

ಅಳವಡಿಸುವವರು: Mary-Anne S.

ಪದ್ಮಾ ಸ್ವೈಲೇಸ್: Vinay Shirol

ತಯಾರಕರು: Bible for Children
www.M1914.org

©2014 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯೆಶಾಯನು ಒಬ್ಬ ಪ್ರವಾದಿಯಾಗಿದ್ದನು. ದೇವರು ಹೇಳಿದ್ದನ್ನು ಜನರಿಗೆ ತಿಳಿಸುವುದು ಅವನ ಕೆಲಸವಾಗಿತ್ತು.



ಜನರು ಯವಾಗಲೂ ದೇವರ ವಾಕ್ಯವನ್ನು ಕೇಳಲು ಇಷ್ಟಪಡಲಿಲ್ಲ ಆದರೆ ಯೇಶಾಯನು ದೇವರನ್ನು ಬಿಡಲಿಲ್ಲ. ಈ ನಾಲ್ಕು ಅರಸರುಗಳ ಆಡಳಿತದ ಕಾಲದಲ್ಲಿ ಯೆಶಾಯನು ಪ್ರಚಾರ ಮಾಡಿದನು.



ಅರಸನಾದ ಉಜ್ಜೀಯನು ಯೂದದಿಂದ ಯೆರುಸಲೇಮ ಪಟ್ಟಣದವರೆಗೂ ಆಳಿದನು. ಮೊದಲು ದೇವರು ಉಜ್ಜೀಯನನ್ನು ಆಶೀರ್ವದಿಸಿದನು. ಯಾಕೆಂದರೆ ಅವನು ದೇವರದೃಷ್ಟಿಯಲ್ಲಿ ಸರಿಯಾದದ್ದನ್ನು ಮಾಡಿದನು. ಆದರೆ ಉಜ್ಜೀಯನು ಗರ್ವಿಷ್ಠನಾಗಿ ದೇವರಿಗೆ ವಿದೇಯನಾಗುವುದನ್ನು ನಿಲ್ಲಿಸಿಬಿಟ್ಟನು ಅವನು ಕುಷ್ಠರೋಗಿಯಾಗಿ ಸಾಯುವ ತನಕ ಒಬ್ಬಂಟಿಗನಾಗಿ ಜೀವಿಸಬೇಕಾಗಿತ್ತು.



ಅರಸನಾದ ಉಜ್ಜೀಯನು ಸುಮರು 60 ವರುಷಗಳು ಆಳಿದನು. ಅವನು ಸತ್ತ ನಂತರ ಅವನ ಮಗನಾದ ಯೋದಾಮನು ಅವನ ಸ್ಥಾನ ತೆಗೆದುಕೊಂಡು ಸುಮಾರು 17 ವರುಷ ಆಳಿದನು. ದೇವರು ಯೋಧಾಮನನ್ನು ಆಶೀರ್ವಧಿಸಿದನು. ಯಾಕೆಂದರೆ ಅವನ ಯೆಶಾಯ ಹಾಗೂ ಇತರ ಪ್ರವಾದಿಗಳ ಮೂಲಕ ದೇವರ ಮಾತನ್ನು ಕೇಳುತ್ತಿದ್ದರು.



ಆಹಾಜನು ಅರಸನಾದ ಯೋಥಾಮನ ಮಗನು ಆಹಾಜನು ಪಟ್ಟಕ್ಕೆ ಬಂದಾಗ ಇಪ್ಪತ್ತು ವರುಷದವನಗಿದ್ದನು ಯೆರೋಸಲೇಮಿನಲ್ಲಿ ಹದಿನಾರು ವರುಷ ಆಳಿದನು. ಆಹಾಜನು ದೇವರನ್ನು ಲಕ್ಷಿಸಲಿಲ್ಲ.

ಅವನು ವಿಗ್ರಹಗಳನ್ನು ಹಾಗೂ ಅನ್ಯದೇವರುಗಳನ್ನು ಆರಾಧಿಸಿದನು.



ಹಾಗೂ ಅನೇಕ ದೇವ ಜನರನ್ನು ಅವನಂತೆ ನಡೆಸಿದನು. ಆದಾಗಿಯೂ ಯೆಶಾಯನು ಅವನನ್ನು ಎಚ್ಚರಿಸಿದನು. ಆಹಾಜನು ದೇವರ ಸೂಚನೆಗಳಿಗೆ ಕಿವಿಗೊಡಲಿಲ್ಲ ಅವನು ಮೂವತ್ತೈದು ವರುಷದವನಾದಾಗ ಸತ್ತನು.





ದೇವರು ಅನಂತರ ಅರಸನಾದ ಹಿಜ್ಕೀಯನನ್ನು ಆಶೀರ್ವದಿಸಿದನು. ಏಕೆಂದರೆ ಅವನು ಎಲ್ಲಾ ವಿಗ್ರಹಗಳನ್ನು ಹಾಗೂ ಅನ್ಯದೇವರುಗಳನ್ನು ತೆಗೆದುಬಿಟ್ಟು ನಿಜ ದೇವರನ್ನು ಪ್ರಾರ್ಥಿಸಿದನು. ಯೂದಾಯದ ಮೇಲೆ ಶತ್ರು ಸೈನ್ಯ ಆಕ್ರಮಿಸಿದಾಗ ಅವರನ್ನು ಗೆಲ್ಲಲು ಅವನ ಸೈನ್ಯ ಬಲಹೀನವಾಗಿದೆಯೆಂದು ಹಿಜ್ಕೀಯನಿಗೆ ತಿಳಿದಿತ್ತು. ಅದಕ್ಕೆ ಯೆಶಾಯನನ್ನು ದೇವರ ಸಹಾಯಕ್ಕಾಗಿ ಪ್ರಾರ್ಥಿಸು ಎಂದು ಕೇಳಿದನು.

ಯೆಶಾಯನು ಈ ಸಂದೇಶವನ್ನು ಅರಸನಿಗೆ ಕಳುಹಿಸಿದನು. "ದೇವರು ಹೇಳುವುದೇನೆಂದರೆ; ಈ ಶತ್ರುಗಳಿಗೆ ಹೆದರದಿರು ನಾನು ಅವರನ್ನು ಬೀಳುವಂತೆ ಮಡುವೆನು..." ಕೂಡಲೇ ದೇವರು ಶತ್ರು ಸೈನ್ಯವನು ಹಿಜ್ಕೀಯನ ಮೇಲೆ ಯುದ್ದ ಮಾಡದೆ ಬಿಟ್ಟು ಹೋಗುವಂತೆ ಮಾಡಿದರು.





ಯೆಶಾಯನ ಸುತ್ತ
ಮುತ್ತ ಇದ್ದ ಜನರು
ದೇವರ ಬಗ್ಗೆ ಅಷ್ಟಾಗಿ
ಯೋಚಿಸುತ್ತಿರಲಿಲ್ಲ
ಆದರೆ ಅವನು
ದೇವರ ಬಗ್ಗೆ ಬಹಳ
ಯೋಚಿಸುತ್ತಿದ್ದನು.



ಒಂದು ದಿನ ಯೆಶಾಯನಿಗೆ
ದರ್ಶನವಾಯಿತು. ಆ ದರ್ಶನ
ಕನಸಿನಲ್ಲಿ ಕಂಡಂತಿರಲಿಲ್ಲ.
ದೇವರು ಎಷ್ಟು
ಮಹಿಮೆಯುಳ್ಳವನು
ಹಾಗೂ ಪರಿಶುದ್ಧನು
ಎಂದು ಯೆಶಾಯನು
ಆ
ದರ್ಶನದಲ್ಲಿ
ನೋಡಿದನು.

“ಯಾರನ್ನು ಕಳುಹಿಸಲಿ?” ಎಂದು ದೇವರು ದರ್ಶನದಲ್ಲಿ ಕೇಳಿದರು “ಇಗೋ ನಾನಿದ್ದೇನೆ ನನ್ನನ್ನು ಕಳುಹಿಸು” ಎಂದು ಯೆಶಾಯ ಉತ್ತರಕೊಟ್ಟನು. ದೇವರು ಏನು ಕೇಳಿದರು ಮಾಡಲು ಎಲ್ಲಿಗೆ ಕಳುಹಿಸಿದರು ಹೋಗಲು ಸಿದ್ಧನಿದ್ದನು.



ಬಹುಶಃ ಯೆಶಾಯನು ದೇವರು ಅವನನ್ನು ದೇವರ ಬಗ್ಗೆ ಕೇಳದೆ ಇರುವ ಜನರ ಬಳಿಗೆ ಕಳುಹಿಸಬಹುದು ಎಂದು ಅಂದುಕೊಂಡನು. ಇಲ್ಲ! ದೇವರು ಹಾಗೆ ಮಾಡಲಿಲ್ಲ.



ದೇವರು ಯೆಶಾಯನಿಗೆ ತನ್ನ ದೇಶದಲ್ಲಿರುವ ತನ್ನ ಜನರ ಹತ್ತಿರ ಮಾತನಾಡುವಂತೆ ಹೇಳಿದನು. ಅವನು ಅವರಿಗೆ ದೇವರು ಅವರ ಪಾಪಗಳಿಗ ದೆಸೆಯಿಂದ ಕೋಪಿಸಿಕೊಂಡಿದ್ದಾನೆ ಎಂದು ಹೇಳಬೇಕಿತ್ತು.



ಯೆಶಾಯನು ಜನರಿಗೆ ಇನ್ನೂ ಅನೇಕ ಸಂಗತಿಗಳನ್ನು ತಿಳಿಸಬೇಕಿತ್ತು ಒಬ್ಬ
ವ್ಯಕ್ತಿಯ ಅದ್ಭುತಕರವಾದ ಸಂಗತಿಗಳು ಹಾಗೂ ಆತನು ಅವರ ಪಾಪಗಳಿಂದ
ರಕ್ಷಿಸಲು ಹಗೂ ಎಲ್ಲಾ ಶತ್ರುಗಳಿಂದ ಬಿಡುಗಡೆ ಮಾಡಲು ಬರುವನು.



ಯೆಹೂದ್ಯದ ಜನರು ಈ ವ್ಯಕ್ತಿಯನ್ನು “ಮಸ್ಸೀಯ” ಎಂದು ಕರೆದರು. ಆದರೂ ಅವರು ದೇವರು ಮಸ್ಸೀಯನನ್ನು ಕಳುಹಿಸುವನೆಂದು ನಿರೀಕ್ಷಿಸಿದರು. ಆದರೆ ಬಹಳ ಜನರು ಆತನು ಬರುವುದೇ ಇಲ್ಲವೆಂದು ಜೀವಿಸಿದರು.





ಮಸ್ಸೀಯನ ಬಗ್ಗೆ
ಯೆಶಾಯನು ಹೇಳಿದಂತ
ಎಲ್ಲ ಸಂಗತಿಗಳು
ಅವನ ಪುಸ್ತಕದಲ್ಲಿ
ಬರೆದಿತ್ತು. ಅವನು
ಈ ಸಂಗತಿಗಳನ್ನೆಲ್ಲಾ
ನಡೆಯುವ ನೂರಾರು
ವರುಷಗಳ ಮುಂಚೆಯೇ
ಬರೆದನು ಯೆಶಾಯನು
ಮಸ್ಸೀಯನ ಬಗ್ಗೆ
ಹೇಳಿದಂತ ಎಲ್ಲಾ
ಸಂಗತಿಗಳು
ನಿಜವಾಗುವುದು.

ದೇವರು ಸ್ವತಃ ಗುರುತನ್ನು ತೋರಿಸುವರೆಂದು ಯೆಶಾಯನು ಹೇಳಿದನು "ಇಗೋ ಒಬ್ಬ ಕನ್ನಿಕೆಯು



ಗರ್ಭಿಣಿಯಾಗಿ ಮಗನನ್ನು ಹಡೆದು ಅವನಿಗೆ ಇಮ್ಯಾನುವೇಲ್ ಎಂದು ಹೆಸರಿಡುವರು" ಎಂದು ಅವನು ಹೇಳಿದನು. ಯೆಶಾಯನು ದೇವರ ಮಸ್ಸೀಯನ ಬಗ್ಗೆ ಮಾತನಾಡುತ್ತಿದ್ದಾನೆ ಎಂದು ಜನರಿಗೆ ತಿಳಿದಿತ್ತು. ಏಕೆಂದರೆ ಒಬ್ಬ ಸ್ತ್ರೀ ಕನ್ಯೆಯಾಗಿ ಮಗುವನ್ನು ಹೆರಲಾರಳು. ಹಾಗೂ ಇಮ್ಮಾನುವೇಲ ಎಂದರೆ ದೇವರು ನಮ್ಮ ಜೊತೆ ಇದ್ದಾನೆ ಎಂದರ್ಥ.





“ಒಂದು ಮಗು ನಮಗಾಗಿ ಹುಟ್ಟಿಗೆಯಷ್ಟೆ. ವರದ ಮಗನು ನಮಗೆ ದೊರೆತನು, ಆಡಳಿತವು ಅವನ ಬಾಹುವಿನ ಮೇಲಿರುವದು, ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ ಸಮಾದಾನದ ಪ್ರಭು” ಎಂಬುದು. ದೇವರ ವಾಗ್ದಾನಗಳು ನಿಜವಾಗುವವೆಂದು ಯೆಶಾಯನು ಕಚಿತವಾಗಿದ್ದನು. ಅವನು ಈ ಘಟನೆಗಳೆಲ್ಲಾ ನಡೆದು ಹೋದಂತೆ ಮಾತಾಡುತ್ತಿದ್ದನು. ಇದೇ ಪ್ರವಾದನೇ.

ಮಸ್ಸೀಯನು ಗಣನೀಯನು ಹಾಗೂ ಮಹತ್ವದ ಕಾರ್ಯವನ್ನು ಮಾಡುವನೆಂದು ಯೆಶಾಯನು ಹೇಳಿದನು. ಮೆಸ್ಸೀಯನು ಸಹ ಜಜ್ಜಲ್ಪಟ್ಟು ಸಾಯಿಸಲ್ಪಡುವನು ಎಂದು ಜನರಿಗೆ ತಿಳಿಸಲು ದೇವರು ಯೇಶಾಯನಿಗೆ ಹೇಳಿದನ್ಲ್. ಮಸ್ಸೀಯನು ಗಣನೀಯನು ಹಗೂ ಅಧಿಕಾರವುಳ್ಳವನಾಗಿ ಹೆಗೆ ಬಲಹೀನ ಹಾಗೂ ಗಾಯಗಳಿಗೆ ಒಳಗಾವುವನೆಂದು ಯೆಶಾಯನು ಆಶ್ಚರ್ಯಪಟ್ಟಿರಬಹುದು, ಆದರೆ ಯೆಶಾಯನು ದೇವರೊಂದಿಗೆ ವಾದಿಸಲಿಲ್ಲ- ದೇವರು ಅವನಿಗೆ ಹೇಳಲು ಹೇಳಿದ ಮಾತುಗಳನ್ನು ಮಾತ್ರ ಪುನಃ ಹೇಳುತ್ತಿದ್ದನು. ಅವನ ಪ್ರವಾದನೆ ನಿಜವಾಗುವಂತೆ ದೇವರು ನೋಡುತ್ತಿದ್ದನು.



ಮಸ್ಸೀಯ ಬರುತ್ತಿದ್ದಾನೆ –ಯೆಹೂದ್ಯ ಜನರಿಗೆ ಅಷ್ಟೇ ಅಲ್ಲ. ದೇವರು ಯೆಶಾಯನಿಗೆ ಮಸ್ಸೀಯನು "ಅನ್ಯಜನಾಂಗಗಳಿಗೆ ಬೆಳಕಾಗಿರುವನು" ಎಂದು ಹೇಳಿದನು. ಅನ್ಯ ಜನಾಂಗಗಳೆಂದರೆ ಪ್ರಪಂಚದಲ್ಲಿ ಯೆಹೋದ್ಯರಲ್ಲದಿರುವ ಜನರು. ದೇವರು ಎಲ್ಲರನ್ನು ಪ್ರೀತಿಸುತಾನೆ. ಆತನ ಮಸ್ಸೀಯನು ತನ್ನ ರಕ್ಷಣೆಯನ್ನು ಲೋಕದ ಕಟ್ಟಕಡೆಗೆ ವ್ಯಾಪಿಸಿ ಎಲ್ಲರನ್ನೂ ಆಶೀರ್ವದಿಸಲು ಬರುವನು.



ಯೆಶಾಯನು ಭವಿಷ್ಯತ್ತನ್ನು ನೋಡಿದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಯೆಶಾಯ, 1, 6, 7, 9, 53

“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”
ಕೀರ್ತನೆ 119:130

# ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16